ಫ್ಯಾಕ್ಸ್ : 0824-2287424

# ಮಂಗಳೂರು ವಿಶ್ವವಿದ್ಯಾನಿಲಯ

(ನ್ಯಾಕ್‌ನಿಂದ ಮಾನ್ಯತೆ ಹೊಂದಿದೆ)

ಕುಲಸಚಿವರ ಕಛೇರಿ
ಮಂಗಳಗಂಗೋತ್ರಿ-574 199

ವಿಷಯ: ಮೂಡಬಿದ್ರೆ ತಾಲೂಕಿನ ಬನ್ನಡ್ಕದಲ್ಲಿ ವಿಶ್ವವಿದ್ಯಾನಿಲಯದ ಘಟಕ ಕಾಲೇಜು ಪ್ರಾರಂಭಿಸುವ ಬಗ್ಗೆ.

ಉಲ್ಲೇಖ: 1. ಡಾ. ಅಶ್ವಥ್ ನಾರಾಯಣ್, ಉಪ ಮುಖ್ಯ ಮಂತ್ರಿಗಳು ಇವರ ಟಿಪ್ಪಣಿ ಸಂಖ್ಯೆ ಸಂಖ್ಯೆ ಉಮು/ಉಶಿ,ಐಟಿ &ತಂ.ಕೌಅ/ 1081 H.O. 2020-21 ದಿನಾಂಕ 02.07.2021
2. ಸರಕಾರದ ಪತ್ರ ಕ್ರಮಾಂಕ ಇಡಿ 26/ಯುಡಿವಿ.2021 ದಿನಾಂಕ 24.08.2021
3. ಈ ಕಛೇರಿಯ ಪತ್ರ ಮಂವಿ/ಡಿಇವಿ(ಡಿ1)39/2021 ದಿನಾಂಕ 18.08.2021
4. ಸರಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಪ್ರೌಢ ಶಿಕ್ಷಣ ಇಲಾಖೆ ಇವರಿಗೆ ಬರೆದ ಪತ್ರ ದಿನಾಂಕ 25.08.2021
5. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಇವರ ಪರಿಷ್ಕೃತ ಜ್ಞಾಪನ ಡಿ1/ಸ.ಹಿ.ಪ್ರಾ.ಶಾ./ಪ್ರಾ.ನಿ.ಪ/02/2020-21 ದಿನಾಂಕ 20.09.2021

---

ಡಾ. ಅಶ್ವಥ್ ನಾರಾಯಣ, ಉಪಮುಖ್ಯಮಂತ್ರಿಗಳು ಇವರು ತಮ್ಮ ಪತ್ರ ದಿನಾಂಕ 02.07.2021(ಉಲ್ಲೇಖ-1)ರ ಪತ್ರದಲ್ಲಿ ಮಾನ್ಯ ಶಾಸಕರ ಕೋರಿಕೆಯ ಮೇರೆಗೆ ಮೂಲ್ಕಿ ಮೂಡಬಿದ್ರೆ ಕ್ಷೇತ್ರ, ದ.ಕ. ಜಿಲ್ಲೆ ಇಲ್ಲಿ ಆರ್ಥಿಕವಾಗಿ ಹಿಂದುಳಿದ ಬಡ, ಮಾಧ್ಯಮ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಉನ್ನತ ವ್ಯಾಸಂಗಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಕಾಲೇಜು ಪ್ರಾರಂಭಿಸಲು ಅಗತ್ಯವಿರುವ ಜಮೀನು ಹಾಗೂ ಇನ್ನಿತರೆ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಮೂಡಬಿದ್ರೆ ತಾಲೂಕಿನ ಪಾಡ್ಯಾರು ಬನ್ನಡ್ಕದಲ್ಲಿ ವಿಶ್ವವಿದ್ಯಾನಿಲಯದ ಘಟಕ ಕಾಲೇಜನ್ನು ಪ್ರಸ್ತುತ ಶೈಕ್ಷಣಿಕ ವರ್ಷದಿಂದಲೇ ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ವಿಶ್ವವಿದ್ಯಾನಿಲಯಕ್ಕೆ ನಿರ್ದೇಶನ ನೀಡಿದ ಹಿನ್ನೆಲೆಯಲ್ಲಿ ಸಿಂಡಿಕೇಟು ಸದಸ್ಯರನ್ನೊಳಗೊಂಡು ಸ್ಥಳ ಪರಿಶೀಲನೆಗೆ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ದಿನಾಂಕ 09.08.2021ರಂದು ಪಾಡ್ಯಾರು ಬನ್ನಡ್ಕಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿರುತ್ತದೆ.

ಸದ್ರಿ ಸಮಿತಿಯ ವರದಿಯನ್ನು ದಿನಾಂಕ 18.08.2021 (ಉಲ್ಲೇಖ(3))ರಂದು ಸರಕಾರಕ್ಕೆ ಸಲ್ಲಿಸಲಾಗಿದೆ. ಸರಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಇವರು ತಮ್ಮ ಪತ್ರ ದಿನಾಂಕ 24.08.2021ರ ಪತ್ರದಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆಯ ಸಹಮತಿ ಪಡೆಯುವ ಷರತ್ತಿಗೆ ಒಳಪಟ್ಟು ಪಾಡ್ಯಾರು, ಬನ್ನಡ್ಕದ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ (ಉಲ್ಲೇಖ-4) ವಿಶ್ವವಿದ್ಯಾನಿಲಯದ ಘಟಕ ಕಾಲೇಜನ್ನು ಪ್ರಾರಂಭಿಸಲು ಹಾಗೂ ಸದರಿ ಕಾಲೇಜಿನಲ್ಲಿ 2021-22ನೇ ಶೈಕ್ಷಣಿಕ ಸಾಲಿನಿಂದ ಬಿ.ಕಾಂ./ಬಿ.ಬಿ.ಎಂ./ಬಿ.ಸಿ.ಎ. ವ್ಯಾಸಂಗ ಕ್ರಮಗಳನ್ನು ಆರಂಭಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ವಿಶ್ವವಿದ್ಯಾನಿಲಯಕ್ಕೆ ನಿರ್ದೇಶನ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಸಹಮತಿ ಪಡೆಯಲು ದಿನಾಂಕ 25.08.2021ರಂದು ಸರಕಾರದ ಮುಖ್ಯ ಅಪರ ಕಾರ್ಯದರ್ಶಿಗಳಿಗೆ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ) ಪತ್ರ ಬರೆಯಲಾಗಿದೆ.

ಈತನ್ಮಧ್ಯೆ, ಮುಖ್ಯ ಕಾರ್ಯದರ್ಶಿಗಳು, ದ.ಕ. ಜಿಲ್ಲಾ ಪಂಚಾಯತ್ ಇವರು ತಮ್ಮ ದಿನಾಂಕ 20.09.2021ರಲ್ಲಿ (ಉಲ್ಲೇಖ-5) ಈ ಕೆಳಗಡೆ ನಮೂದಿಸಿದ ಷರತ್ತುಗಳಿಗೆ ಒಳಪಟ್ಟು ಮೂಡಬಿದ್ರೆ ತಾಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಪಾಡ್ಯಾರಿನಲ್ಲಿ ಖಾಲಿ ಇರುವ ತರಗತಿ ಕೊಠಡಿಗಳಲ್ಲಿ ತಾತ್ಕಾಲಿಕವಾಗಿ ಪ್ರಥಮ ದರ್ಜೆ ಕಾಲೇಜು ಸ್ಥಾಪಿಸಲು ಅನುಮತಿ ನೀಡಿರುವ ಹಿನ್ನೆಲೆಯಲ್ಲಿ ಈ ಆದೇಶ ಹೊರಡಿಸಲಾಗಿದೆ.

1. ಸದ್ರಿ ಶಾಲಾ ಕಟ್ಟಡದ ದುರಸ್ತಿಯನ್ನು ಕಾಲೇಜು ಶಿಕ್ಷಣ ಇಲಾಖೆಯಿಂದ ಮಾಡಿಸುವುದು
2. ಶಾಲಾ ಜಮೀನು ಮತ್ತು ಸ್ಥಿರಾಸ್ತಿಗಳು ಶಾಲಾ ಹೆಸರಿನಲ್ಲಿ ಮುಂದುವರೆಯುವುದು
3. ಶಾಲಾ ವಿದ್ಯುಚ್ಛಕ್ತಿ ಮತ್ತು ನೀರಿನ ಬಿಲ್ಲನ್ನು ಭರಿಸುವುದು
4. ಪ್ರಸ್ತುತ ನಡೆಯುತ್ತಿರುವ ಪ್ರಾಥಮಿಕ ಶಾಲಾ ತರಗತಿ ಮತ್ತು ಪಠ್ಯೇತರ ಚಟುವಟಿಕೆ ನಡೆಸಲು ಯಾವುದೇ ಅಡಚಣೆಯಾಗದಂತೆ ಕ್ರಮವಹಿಸುವುದು
5. ಕಾಲೇಜು ಪ್ರಾರಂಭಿಸುವ ಬಗ್ಗೆ ಮತ್ತು ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಶಾಲಾಭಿವೃದ್ಧಿ ಸಮಿತಿಯವರಿಂದ ಸಹಮತಿ ಪಡೆಯುವುದು
6. ಚುನಾವಣಾ ಮತದಾನ ಕೇಂದ್ರವಾಗಿದ್ದು, ಚುನಾವಣಾ ಕಾರ್ಯಕ್ಕೆ ಕೊಠಡಿಗಳನ್ನು ಒದಗಿಸುವುದು

**ಆದೇಶ ಸಂಖ್ಯೆ: ಸಂಖ್ಯೆ: ಮಂವಿ/ಡಿಇವಿ(ಡಿ1)39/2021-22 ದಿನಾಂಕ 21/09/2021**

ಮೂಡಬಿದ್ರೆ ತಾಲೂಕಿನ ಪಾಡ್ಯಾರು ಬನ್ನಡ್ಕದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಲ್ಲೇಖ (2) ರಲ್ಲಿ ಸರಕಾರದ ಆದೇಶ ಮತ್ತು ಉಲ್ಲೇಖ(5)ರಲ್ಲಿ ಜಿಲ್ಲಾ ಪಂಚಾಯತ್ ಇವರು ವಿಧಿಸಿದ ಷರತ್ತುಗಳಿಗೆ ಒಳಪಟ್ಟು 2021-22ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜನ್ನು ಪ್ರಾರಂಭಿಸಲಾಗಿದೆ

ಆದೇಶದ ಮೇರೆಗೆ,

ಕುಲಸಚಿವರು